ಶ್ರೀ ಕೃಷ್ಣ —ಸಣ್ಣ ಸಣ್ಣ ಕಾರಣಗಳಿಗೋಸ್ಕರವಾಗಿ ಹೀಗೆ ವಿಳಂಬ ಆದರೆ ಆರ್ಥಿಕ ಇಲಾಖೆಯವರಿಗೂ ಇವರಿಗೂ ಕೊಕ್ಕೆ-ಆರ್ಡಿನೇಶನ್ ಇಲ್ಲ ಎಂದು ಹೇಳಬೇಕಾಗುತ್ತದೆ. ನಮಗೆ ನಿರ್ದಿಷ್ಟವಾಗಿ ಯಾವ ತಿಂಗಳಲ್ಲಿ ನೀರು ಕೊಡುತ್ತೀರಿ ಎಂದು ಹೇಳಬೇಕು.

ಶ್ರೀ ಹೆಚ್. ಡಿ. ದೇವೇಗೌಡ — ಈಗ ನಾನು ಇಷ್ಟು ಮಾತ್ರ ಹೇಳಬಲ್ಲೆ. ಮಾನ್ಯ ಸದಸ್ಯರಿಗೆ ಹೆಚ್ಚಿನ ಆಸಕ್ತಿ ತಮ್ಮ ಕ್ಷೇತ್ರದ ಬಗ್ಗೆ ಇರಬಹುದು ಆಲ್ಲಿ ನೀರು ಕೊಡಬೇಕೆನ್ನುವ ಆಸಕ್ತಿ ಸಹ ಇರಬಹುದು. ಆದರೆ ಸುಮಾರು ೧೫೯೦ರಿಂದ ೧೫೫೦ರವರೆವಿಗೆ ಎಲ್ಲಾ ಫೀಲ್ಡ್ ಕೆನಾಲ್ಸ್ ಮೈನ್ ಕೆನಾಲ್ಸ್ ಕೆಲಸ ಮುಗಿದಿದೆ. ಆವರೆ ಇಲ್ಲಿ ಸ್ಲಿಪ್ ಆಗಿರುವುದರಿಂದ ನೀರು ಮುಂದೆ ಹೋಗುವುದಕ್ಕೆ ಅವಕಾಶ ಇಲ್ಲ. ನೀರು ಕೊಡಬೇಕೆನ್ನುವುದು ಸರ್ಕಾರದ ಇಚ್ಚೆ ಸಹ ಇದೆ. ಆದರೆ ಈಗ ಇದಕ್ಕೆ ಸುಮಾರು ೪೫ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಇಲ್ಲಿ ಸ್ಲಿಪ್ ಆಗಿರುವುದನ್ನು ಬೇಕಾದರೆ ನನ್ನ ಜೊತೆಯಲ್ಲಿ ಮಾನ್ಯ ಅಧ್ಯಕ್ಷರೇ ಬಂದು ನೋಡಲಿ. ಅಥವಾ ಮಾನ್ಯ ಮುಖ್ಯಮಂತ್ರಿಗಳೇ ಬಂದ ಮೇಲೆ ಅವರನ್ನು ಸಹ ಕರೆದುಕೊಂಡು ಹೋಗಿ ತೋರಿಸಿ ಮಾತನಾಡೋಣ. ಏತಕ್ಕೆಂದರೆ ಅವರೇ ಹಣಕಾಸಿನ ಸಚಿವರಾಗಿರುವುದರಿಂದ ಅವರೂ ಸಹ ನೋಡಲಿ. ಜೊತೆಯಲ್ಲಿ ಬೇಕಾದರೆ ಮಾನ್ಯ ಸದಸ್ಯರು ಬರಲಿ, I can assure you that we are equally interested to see that this work is completed. ಬಹುಶಃ ಈ ಸಂದರ್ಭದಲ್ಲಿ ನಾನು ಇಷ್ಟು ಹೇಳಬಲ್ಲೆ. We are all there to cater the needs of the people and not to cater the needs of certain technical formalities. ರೂಲ್ಸ್‌ಗಳನ್ನು ತಡೆದಿಟ್ಟುಕೊಂಡು ನಾವು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಬಂದ ತಕ್ಷಣ ಅವರನ್ನೇ ಆ ಜಾಗಕ್ಕೆ ಕರೆದೂ ಕೊಂಡು ಹೋಗಿ ತೋರಿಸಿ ಚರ್ಚೆ ಮಾಡೋಣವೆನ್ನುವ ಆಶ್ವಾಸನೆಯನ್ನು ಮಾತ್ರ ಈ ಸಂದರ್ಭದಲ್ಲಿ ನಾನು ಕೊಡಬಲ್ಲೆ.

(೨) ಪಟ್ಟಣ ಪ್ರದೇಶಗಳಲ್ಲಿ ಹೋಟೆಲುಗಳಲ್ಲಿ ತಿಂಡಿಗಳ ಬೆಲೆಯನ್ನು ಏರಿಸಿರುವುದು ಮತ್ತು ಗುಣಮಟ್ಟದ ಇಳಿಮುಖದ ಬಗ್ಗೆ.

ಶ್ರೀ ಎಸ್. ನಂಜಪ್ಪ.—ಮಾನ್ಯ ಅಧ್ಯಕ್ಷರೇ ಪಟ್ಟಣ ಪ್ರದೇಶಗಳಲ್ಲಿರತಕ್ಕಂಥ ಹೋಟೆಲ್‌ಗಳಲ್ಲಿ ತಿಂಡಿಗಳ ಬೆಲೆಯನ್ನು ಹೆಚ್ಚು ಮಾಡಿರುವುದರ ಜೊತೆಗೆ ಅದರ ಗುಣಮಟ್ಟ ಮತ್ತು ಗಾತ್ರದಲ್ಲಿ ಹೆಚ್ಚು ಕಡಿಮೆಯಾಗಿರುವ ಬಗ್ಗೆ ನಾನು ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.— ಮಾನ್ಯ ಅಧ್ಯಕ್ಷರೇ ನಾನು ಈ ಬಗ್ಗೆ ಒಂದು ಹೇಳಿಕೆಯನ್ನು ಕೊಡ ಬಯಸುತ್ತೇನೆ.

ಬೆಂಗಳೂರು ನಗರದ ಹೋಟೆಲುಗಳಲ್ಲಿ ಮತ್ತು ಜಿಲ್ಲಾ ಪ್ರದೇಶಗಳ ಹೋಟೆಲುಗಳಲ್ಲಿ ತಿಂಡಿ ಪದಾರ್ಥಗಳ ಬೆಲೆಯು ಸ್ವಲ್ಪ ಮಟ್ಟಿಗೆ ಏರಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈಗಾಗಲೇ ಈ ವಿಷಯದಲ್ಲಿ ರಾಜ್ಯದ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಹೋಟೆಲು ಮಾಲೀಕರ ಸಭೆ ಕರೆದೂ ಚರ್ಚೆ ಮಾಡಿರುತ್ತಾರೆ. ಹೋಟೆಲು ಮಾಲೀಕರುಗಳು ತಮ್ಮ ಸಮಸ್ಯೆಗಳನ್ನು ವಿವರಿಸಿ, ಮಂಕ್ತ ಮಾರುಕಟ್ಟೆಯಲ್ಲಿ ಎಣ್ಣೆ ಬೆಲೆ, ಆಹಾರ ಪದಾರ್ಥಗಳ ಬೆಲೆ, ವಿದ್ಯುಚ್ಛಕ್ತಿ ಖರ್ಚು, ಕೂಲಿ, ತೆರಿಗೆ ಹಾಗೂ ಇತರ ಎಲ್ಲಾ ಬಾಬುಗಳಲ್ಲೂ ಬೆಲೆಗಳು ಏರಿದ್ದು, ಹೋಟೆಲು ಮಾಲೀಕರುಗಳಿಗೆ ಬಹಳ ತೊಂದರೆಯುಂಟಾಗಿದೆಯೆಂದೂ, ಆದಾಗ್ಯೂ ಮುಂದೆ ತಾವು ತಿಂಡಿ ಪದಾರ್ಥಗಳ ಬೆಲೆಯನ್ನು ಏರಿಸುವುದಿಲ್ಲವೆಂದು ಅವರು ಆಶ್ವಾಸನೆ ಕೊಟ್ಟಿರುತ್ತಾರೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರ ಒಂದು ಸಮಿತಿಯನ್ನು ರಚಿಸಿ, ತಿಂಡಿ ಪದಾರ್ಥಗಳ ಬೆಲೆ ಏರಿಕೆಯನ್ನು ತಡೆಗಟ್ಟುವ ಬಗ್ಗೆ ಒಂದು ವರದಿಯನ್ನು ಕೊಡುವಂತೆ ಆದೇಶ ಹೊರಡಿಸಿದ್ದಾರೆ. ಈಗಾಗಲೇ ಸಮಿತಿಯು ಹೋಟೆಲು ಮಾಲೀಕರ ಜೊತೆ ಒಂದು ಸಭೆ ನಡೆಸಿ ಈ ವಿಷಯವನ್ನು ಚರ್ಚಿಸಿ ಇನ್ನೂ ಹೆಚ್ಚಿನ ಮಾಹಿತಿಯನ್ನು ಒದಗಿಸಲು ಹೋಟೆಲು ಮಾಲೀಕರುಗಳಿಗೆ ತಿಳಿಸಲಾಗಿದೆ. ಮಾಹಿತಿ ಬೊರಕಿದ ನಂತರ ಮತ್ತೆ ಈ ವಿಷಯದಲ್ಲಿ ಮತ್ತೊಮ್ಮೆ ಹೋಟೇಲು ಮಾಲೀಕರುಗಳ ಜೊತೆ ಚರ್ಚಿಸಿ

ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಈ ಸಂದರ್ಭದಲ್ಲಿ ಹೋಟೆಲುಗಳಿಗೆ ಸರ್ಕಾರದ ವತಿಯಿಂದ ಅಕ್ಕಿ ತಾಳೆ ಎಣ್ಣೆ, ಸಕ್ಕರೆ ಯಾವುದನ್ನೂ ನಿಯಂತ್ರಿತ ಬೆಲೆಯಲ್ಲಿ ಕೊಡುತ್ತಿಲ್ಲ. ಹೋಟೇಲು ಮಾಲೀಕರುಗಳು ತಮ್ಮ ಬೇಡಿಕೆಗಳಿಗೆ ಪೂರ್ಣವಾಗಿ ಮುಕ್ತ ಮಾರುಕಟ್ಟೆಯನ್ನೇ ಅವಲಂಬಿಸಿರುತ್ತಾರೆ. ಆದಾಗ್ಯೂ ಅನಾವಶ್ಯಕವಾಗಿ ಬೆಲೆ ಏರಿಸದಂತೆ ಹೋಟೇಲ್ ಮಾಲೀಕರ ಜೊತೆ ಚರ್ಚಿಸಿ ಕ್ರಮ ತೆಗೆದುಕೊಳ್ಳಲಾಗುವುದು.

ಹಾಲಿ ನಗರದಲ್ಲಿರುವ ಹೋಟೇಲುಗಳಲ್ಲಿ ಇರುವ ತಿಂಡಿ ಪದಾರ್ಥಗಳ ಬೆಲೆಯ ಒಂದು ಪಟ್ಟಿಯನ್ನು ಲಗತ್ತಿಸಿದೆ

ಈ ವಿಷಯದಲ್ಲಿ ಪುರಸಭೆಗಳು ಮತ್ತು ನಗರ ಸಭೆಗಳ ಪಾತ್ರವು ಪ್ರಾಮುಖ್ಯವಾದುದು. ಹೋಟೇಲುಗಳ ಲೈಸನ್ಸ್‌ಗಳನ್ನು ಕೊಡುವ ಅಧಿಕಾರ ಇವರಿಗಿದ್ದು, ಗುಣಮಟ್ಟವನ್ನು ಪರಿಶೀಲಿಸುವ ಮತ್ತು ಸೂಕ್ತ ಕ್ರಮ ತೆಗೆದುಕೊಳ್ಳುವ ಅಧಿಕಾರವೂ ಸಹ ಈ ಪುರ ಸಭೆ ಹಾಗೂ ನಗರ ಸಭೆಗಳ ವ್ಯಾಪ್ತಿಗೆ ಬರುತ್ತದೆ. ಈಗಾಗಲೇ ಸರ್ಕಾರವು ರಚಿಸಿರುವ ಸಮಿತಿಯಲ್ಲಿ ಬೆಂಗಳೂರು ನಗರ ಸಭೆಯ ಕಮಿಷನರ್‌ರವರು ಈ ಸಮಿತಿಯ ಸದಸ್ಯರಾಗಿರುತ್ತಾರೆ. ಹೋಟೆಲುಗಳಲ್ಲಿ ತಿಂಡಿ ಪದಾರ್ಥದ ಬೆಲೆ ಹೆಚ್ಚಳವನ್ನು ಸರ್ಕಾರ ಸಹಿಸುವುದಿಲ್ಲ. ಗ್ರಾಹಕರ ಹಿತರಕ್ಷಣೆಗಾಗಿ ಸರ್ಕಾರ ಯಾವ ಉಗ್ರ ಕ್ರಮವನ್ನೂ ತೆಗೆದುಕೊಳ್ಳಲು ಹಿಂಜರಿಯುವುದಿಲ್ಲ.

ಬೆಂಗಳೂರು ನಗರದ ಹೋಟೆಲುಗಳಲ್ಲಿ ಮಾರುವ ತಿಂಡಿ ತಿನಿಸುಗಳ ಬೆಲೆಯ ೧೯೮೫–೮೬ನೇ ಸಾಲಿನ ಹೋಲಿಕೆಯ ಪಟ್ಟಿ

ಕ್ರಮ ಸಂಖ್ಯೆ	ಖಾದ್ಯ ಪದಾರ್ಥಗಳು	'ಎ' ಶ್ರೇಣಿ		'ಬಿ' ಶ್ರೇಣಿ		'ಸಿ' ಶ್ರೇಣಿ	
		೧೯೮೫—೧೯೮೬		೧೯೮೫—೧೯೮೬		೧೯೮೫—೧೯೮೬	
೧.	ಇಡ್ಲಿ — ೨	೧–೫೦	೨–೦೦	೧–೦೦	೧–೨೦	೦–೮೦	೧–೦೦
೨.	ಖಾರಾಬಾತ್	೨–೦೦	೨–೨೫	೧–೫೦	೧–೫೦	೧–೦೦	೧–೨೦
೩.	ಮಸಾಲೆದೋಸೆ	೩–೦೦	೩–೭೫	೨–೫೦	೨–೫೦	೧–೭೫	೨–೦೦
೪.	ಪಲಾವ್ (ಬಿಸಿಬೇಳೆಬಾತ್)	೨–೭೫	೩–೫೦	೧–೭೫	೨–೭೫	೧–೫೦	೨–೦೦
೫.	ಪೂರಿ	೩–೦೦	೩–೭೫	೨–೫೦	೨–೫೦	೧–೫೦	೧–೭೫
೬.	ಕಾಫಿ	೧–೫೦	೨–೦೦	೧–೦೦	೧–೨೦	೦–೮೦	೦–೯೦
೭.	ಟೀ	೧–೫೦	೨–೦೦	೧–೦೦	೧–೨೦	೦–೮೦	೦–೯೦
೮.	ಪ್ಲೈನ್‌ದೋಸೆ	೨–೦೦	೨–೨೫	೧–೫೦	೧–೮೦	೧–೨೫	೧–೫೦
೯.	ಕೇಸರಿಬಾತ್	೧–೫೦	೨–೦೦	೧–೨೦	೧–೫೦	೧–೦೦	೧–೨೦
೧೦.	ಊಟ (ಪ್ಲೇಟ್)	೮–೦೦	೮–೦೦	೬–೦೦	೬–೦೦	೫–೦೦	೪–೫೦
೧೧.	ಸ್ಪೆಷಲ್ ಊಟ (ಪ್ಲೇಟ್)	—	೧೫–೦೦	—	—	—	—

ಶ್ರೀ ಎಸ್, ನಂಜಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳ ಉತ್ತರವನ್ನು ನೋಡಿದರೆ ಅವರು ಸಂಪೂರ್ಣವಾಗಿ ಹೋಟೆಲ್ ಮಾಲೀಕರ ಮೇಲೆ ಅನುಕಂಪವನ್ನು ವ್ಯಕ್ತಪಡಿಸಿದಂತೆ ಕಾಣುತ್ತದೆ ಮಾನ್ಯ ಮಂತ್ರಿಗಳನ್ನು ತಮ್ಮ ಮುಖಾಂತರ ಕೇಳಿಕೊಳ್ಳುವುದೇನೆಂದರೆ ಈ ಹೋಟೆಲ್‌ಗಳಲ್ಲಿ ಬೆಲೆ ಏರಿಕೆಯನ್ನು ಕಡಿಮೆ ಮಾಡುವುದಕ್ಕೆ ಸರಕಾರದವರು ಏನೇನು ಕ್ರಮ ಕೈಗೊಂಡಿದ್ದಾರೆ ? ಎರಡನೆಯದಾಗಿ, ಹೋಟೆಲ್ ಮಾಲೀಕರ ಜೊತೆಯಲ್ಲಿ ಎಷ್ಟು ಸಾರಿ ಸಭೆಯನ್ನು ಕರೆದು ಮಾತುಕತೆ ಮಾಡಿದ್ದೀರಿ ?

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಸದಸ್ಯರು ಹೇಳಿದಂತೆ ನಾವು ಹೋಟೆಲ್ ಮಾಲೀಕರ ಪರವಾಗಿಲ್ಲ. ಬೆಲೆ ಏರಿಕೆಯನ್ನು ತಡೆಗಟ್ಟುವುದಕ್ಕೆ ಏನೇನು ಕ್ರಮ ಕೈಗೊಂಡಿದ್ದೀರಿ ಎಂದು ಮಾನ್ಯ ಸದಸ್ಯರು ಕೇಳಿದರು. ಆ ಬಗ್ಗೆ ಹೇಳುವುದಾದರೆ ನಾವು ಈಗಾಗಲೇ ಎರಡು ಸಾರಿ ಹೋಟೆಲ್ ಮಾಲೀಕರ ಸಭೆಯನ್ನು ನಡೆಸಿ ಅವರ ಸಮಸ್ಯೆಗಳನ್ನು ಆಧ್ಯಯನ ಮಾಡಿದಾಗ ಅವರು ವಿದ್ಯುಚ್ಛಕ್ತಿ, ನೀರು, ಕಾರ್ಪೊರೇಷನ್ ತೆರಿಗೆ ಇತ್ಯಾದಿ ಅಗತ್ಯ ವಸ್ತುಗಳ ಬೆಚ್ಚದಲ್ಲಿ ಏರಿಕೆಯಾಗಿರುವುದರಿಂದ ನಾವು ಬೆಲೆಗಳನ್ನು ಹೆಚ್ಚು ಮಾಡಬೇಕಾಗಿ ಬಂತು ಎಂದು ತಿಳಿಸಿದ್ದಾರೆ. ಇನ್ನು ಸರ್ಕಾರದವರು ಹೋಟೆಲ್ ಮಾಲೀಕರಿಗೆ ಏನೇನು ರಿಯಾಯಿತಿಯನ್ನು ಕೊಡುತ್ತಿದ್ದೇವೆಂದರೆ ಅಕ್ಕಿಯ ಮೇಲೆ ಇದ್ದಂಥ ಮಾರಾಟ ತೆರಿಗೆಯನ್ನು ೪ ಪರ್ಸೆಂಟ್‌ನಿಂದ ೨ ಪರ್ಸೆಂಟ್‌ಗೆ ಇಳಿಸಿದ್ದೇವೆ. ಮತ್ತೆ ಎಣ್ಣೆ ಮೇಲಿನ ಮಾರಾಟ ತೆರಿಗೆಯನ್ನು ಕಡಿಮೆ ಮಾಡಿದ್ದೇವೆ. ಮತ್ತೆ ಹೋಟೆಲ್‌ಗಳ ಮೇಲೆ ವಿಧಿಸಿದ್ದ ಮಾರಾಟ ತೆರಿಗೆಯನ್ನು ೫ ಪರ್ಸೆಂಟ್‌ನಿಂದ ೪ ಪರ್ಸೆಂಟ್‌ಗೆ ಇಳಿಸಿದ್ದೇವೆ. ಸರ್ಕಾರದವರು ಸಾಕಷ್ಟು ಸಹಾಯವನ್ನು ಹೋಟೆಲ್ ನವರಿಗೆ ಮಾಡಿದ್ದಾರೆ. ಈ ವಿಷಯವನ್ನು ಹೇಳಿದಾಗ ಅವರು ಇನ್ನು ಮುಂದೆ ನಾವು ಬೆಲೆ ಏರಿಕೆಯನ್ನು ಮಾಡುವುದಿಲ್ಲವೆಂದು ನಮಗೆ ತಿಳಿಸಿದ್ದಾರೆ. ಬೆಲೆ ಏರಿಕೆ ವಿಷಯದಲ್ಲಿ ಮಾನ್ಯ ಸದಸ್ಯರಿಗೆ ಒಂದು ವಿಷಯವನ್ನು ಹೇಳುವುದಾದರೆ ಅಗತ್ಯ ವಸ್ತುಗಳ ಬೆಲೆ ಶೇಕಡ ೧೦ರಷ್ಟು ಏರಿಸಿದ್ದರೆ ಹೋಟೆಲ್‌ನವರು ಬೆಲೆ ಏರಿಸಿರುವುದು ಕೇವಲ ೬ ಪರ್ಸೆಂಟ್ ಮಾತ್ರ. ಆದ್ದರಿಂದ ಇನ್ನು ಮುಂದೆ ಬೆಲೆ ಏರಿಕೆಯಾಗದಂತೆ ನೋಡಿಕೊಳ್ಳಲಾಗುತ್ತದೆ. ಆ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂದು ಮಾನ್ಯ ಸದಸ್ಯರು ಕೇಳಿದರು. ಆ ಬಗ್ಗೆ ಹೇಳುವುದಾದರೆ ಸರ್ಕಾರ "Karnataka Food Stuffs Display of Price by Caterers Order 1983". ಎಂದು ಒಂದು ಆದೇಶವನ್ನು ಹೊರಡಿಸಿದೆ. ಇದರ ಪ್ರಕಾರ ಹೋಟೆಲ್ ಮಾಲೀಕರು ಮತ್ತು ಉಪ ಹೋಟೆಲ್ ಮಾಲೀಕರು ಹೋಟೆಲ್‌ಗಳಲ್ಲಿ ಬೆಲೆಗಳ ವಿವರಗಳನ್ನು ಹಾಕಿರಬೇಕು. ಮತ್ತು ರಸೀದಿ ಕೊಡಬೇಕೆಂದು ಇದೆ. ಈ ಆದೇಶವನ್ನು ಉಲ್ಲಂಘನೆ ಮಾಡಿದವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವ ಅವಕಾಶ ಇದೆ.

ಶ್ರೀ ಎಸ್. ನಂಜಪ್ಪ.—ಅಗತ್ಯವಸ್ತುಗಳ ಬೆಲೆ ಶೇಕಡ ೧೦ರಷ್ಟು ಏರಿಕೆಯಾಗಿದೆ ಆದರೆ ಅವರು ೬ ಪರ್ಸೆಂಟ್‌ನಷ್ಟು ಮಾತ್ರ ಬೆಲೆ ಏರಿಕೆ ಮಾಡಿದ್ದಾರೆಂದು ಮಾನ್ಯಮಂತ್ರಿಗಳು ಹೇಳುವುದು ಸರಿಯಲ್ಲ ಆದರೆ ಇವತ್ತು ಹೋಟೆಲ್‌ಗಳಲ್ಲಿ ಗಾತ್ರ ಮತ್ತು ಗುಣಮಟ್ಟ ಬಹಳ ಕಡಿಮೆಯಾಗಿದೆ. ಒಂದು ಲೋಟ ಕಾಫಿ ಕುಡಿಯಲು ಹೋದರೆ ಗ್ಲಾಸ್ ಸಹ ಬಹಳ ಚಿಕ್ಕದಾಗಿದೆ. ಇದರಿಂದ ಶೇಕಡ ೨೦ರಷ್ಟು ಬೆಲೆ ಏರಿಕೆಯಾಗಿದೆ. ಇದನ್ನು ಪರಿಶೀಲನೆ ಮಾಡಬೇಕೆಂದು ವಿನಂತಿ.

ಶ್ರೀ ಜಿ. ಬಸವಣ್ಣಪ್ಪ.—ಆಹಾರ ಇಲಾಖೆಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದ್ದೇವೆ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಂಥ ವಿಷಯವನ್ನು ಕೂಲಂಕುಷವಾಗಿ ಚರ್ಚೆ ಮಾಡಲಾಗುವುದು.

3. ಚಿತ್ರಮಂದಿರಗಳಲ್ಲಿ ಚಿತ್ರಪ್ರದರ್ಶನಗಳ ಸಂದರ್ಭದಲ್ಲಿ ಕಾನೂನಿನ ಉಲ್ಲಂಘನೆ

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ ಚಲನಚಿತ್ರಮಂದಿರಗಳಲ್ಲಿ ನಡೆಯುತ್ತಿರುವ ಅನ್ಯಾಯಗಳ ಬಗ್ಗೆ ನಾನು ಮಾನ್ಯ ವಾರ್ತಾ ಹಾಗೂ ಕ್ರೀಡೆ ಮತ್ತು ಪ್ರವಾಸೋದ್ಯಮ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜೀವರಾಜ ಆಳ್ವ(ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು).—

ಬೆಂಗಳೂರು ನಗರ ಹಾಗೂ ಇತರ ಸ್ಥಳಗಳಲ್ಲಿ ಚಲನಚಿತ್ರಮಂದಿರಗಳಲ್ಲಿ ದಿನವೊಂದಕ್ಕೆ ಐದು ಚಲನಚಿತ್ರ ಪ್ರದರ್ಶನಗಳನ್ನು ನಡೆಸಲಾಗುತ್ತಿತ್ತು. ಆದುದರಿಂದ ಚಲನಚಿತ್ರಮಂದಿರದ ಶುಚಿತ್ವ ಕೆಳೆದುಕೊಂಡು ಕೆಟ್ಟ ವಾತಾವರಣದಿಂದ ಜನರ ಆರೋಗ್ಯ ಕೆಡುತ್ತದೆಂಬ ಕಾರಣದಿಂದ ಕರ್ನಾಟಕ ಸಿನಿಮಾ (ಆರ್)ರೂಲ್ಸ್ ೧೯೭೧ರ ನಿಯಮ ೪೧ನ್ನು ಅಧಿಸೂಚನೆ ಸಂಖ್ಯೆ ಹೆಚ್‌ಡಿ ೫೯ ಸಿಎನ್‌ಎ ೮೧, ದಿನಾಂಕ ೧೬-೮-೧೯೮೧ರಂದು ತಿದ್ದುಪಡಿ ಮಾಡಲಾಯಿತು. ಈ ತಿದ್ದುಪಡಿ ಮಾಡಿದ ಹೊಸ ನಿಯಮ ೪೧(ಎ)ರ ಪ್ರಕಾರ ಚಲನಚಿತ್ರಮಂದಿರದ ಪರವಾನಗಿದಾರರು ದಿನವೊಂದಕ್ಕೆ ೪ಕ್ಕಿಂತ ಹೆಚ್ಚು ಚಲನಚಿತ್ರ ಪ್ರದರ್ಶನಗಳನ್ನು ನಡೆಸಕೂಡದು. ಸರ್ಕಾರದ ಈ ತಿದ್ದುಪಡಿಯ ವಿರುದ್ಧ ಕೆಲವು ಚಿತ್ರಮಂದಿರಗಳ